ದಿನಾಂಕಃ 07.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದು ಪಾಟೀಸವಾಲುಃ ವಾದಿ ಪರ ವಕೀಲರಿಂದಃ</u>**

11ನೇ ಪ್ರತಿವಾದಿಗೆ ಪ್ರಶಾಂತ ಲಾಡ್ಜನ್ನು ಪ್ರಾರಂಭಿಸಿಕೊಡುವಾಗ ಆತನಿಗೆ ವಯಸ್ಸು 22 ಆಗಿತ್ತು. ಸದರಿ ಲಾಡ್ಜನ್ನು ಪ್ರಾರಂಭಿಸುವಾಗ ಆತನ ವಯಸ್ಸು 15 ಇತ್ತು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾವೆಲ್ಲರೂ ಅಂದರೆ ವಾದಿ, ಮೃತ ಈರಪ್ಪ, ರಾಮಪ್ಪ, ಲಕ್ಷ್ಮಣ ಎಲ್ಲರೂ ಬೇರೆ ಬೇರೆ ಉದ್ಯೋಗ ಮಾಡುತ್ತಿದ್ದರಿಂದ ಎಲ್ಲರೂ ಸೇರಿಕೊಂಡು ಸದರಿ ಲಾಡ್ಜನ್ನು ಕಟ್ಟಿಸಿ ಅದರ ದೇಖರೇಕಿ ನೋಡಿಕೊಳ್ಳಲು 11ನೇ ಪ್ರತಿವಾದಿಗೆ ಒಪ್ಪಿಸಿದ್ದರು ಎಂದರೆ ಸಾಕ್ಷಿಯು ನಾನು ಚಿಕ್ಕವನಿದ್ದು, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆಗ ನನ್ನ ವಯಸ್ಸು ಸುಮಾರು 14-15 ವರ್ಷ ಇದ್ದಿರಬಹುದು. ಸದರಿ 11ನೇ ಪ್ರತಿವಾದಿಗೆ ಸಾಲ ಪಡೆಯಲು ಅನುಕೂಲವಾಗಲಿ ಎಂದು ಸಿ.ಟಿ.ಎಸ್.ನಂ.3226 ನೇದ್ದನ್ನು ಭಕ್ಷಿಸ ಪತ್ರದ ಮೂಲಕ ಆತನ ಹೆಸರಿಗೆ ನಮ್ಮ ತಂದೆ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಭಕ್ಷಿಸ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಅದೇ ರೀತಿ ರಿ.ಸ.ನಂ.182/7 ಇದನ್ನು ನಮ್ಮ ತಂದೆಯವರು ಖರೀದಿ ಮಾಡಿದ್ದು, ಅದನ್ನು ವಾದಿಗೆ ಭಕ್ಷಿಸ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಗೋಕಾಕದ ನಾಕಾ ನಂ.1 ರ ಹತ್ತಿರ 11ನೇ ಪ್ರತಿವಾದಿ ಶುಭಂ ಗಾರ್ಡನ್ ಎಂಬ ಹೆಸರಿನ ಕಲ್ಯಾಣ ಮಂಟಪವನ್ನು ಕಟ್ಟಿದ್ದು, ಅದರ ಖರ್ಚಿಗಾಗಿ ನಮ್ಮ ಕುಟುಂಬದವರು ಎಲ್ಲರೂ ಸೇರಿಕೊಂಡು ಸದರಿ ಮೇಲೆ ಹೇಳಿದ ರಿ.ಸ.ನಂ.182/7 ನೇದ್ದನ್ನು ದಿ:27.09.2014 ರಂದು ದುಂಡೇಶ ಕಾಮಪ್ಪ ಕುಳ್ಳೂರ ರವರಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುತ್ತೇವೆ ಎಂದರೆ ನನಗೆ ಯಾರು ತಿಳಿಸಿಲ್ಲ ಎಂದು ನುಡಿಯುತ್ತಾರೆ.

ನಮ್ಮ ಕುಟುಂಬದಲ್ಲಿ ಎಲ್ಲರನ್ನು ಸೇರಿಕೊಂಡು ಅಂದರೆ ಅಣ್ಣ ತಮ್ಮಂದಿರು, ಮಕ್ಕಳು, ಮೊಮ್ಮಕ್ಕಳು ಸೇರಿ ಸುಮಾರು 90 ಜನ ಇರುತ್ತೀರಿ ಎಂದರೆ ಸಾಕ್ಷಿಯು 20 ವರ್ಷಗಳ ಹಿಂದೆ ಅಂದರೆ ನಾನು ಚಿಕ್ಕವನಿದ್ದಾಗ 30-40 ಜನರು ಇದ್ದೇವು ಎಂದು ನುಡಿಯುತ್ತಾರೆ. ನಮ್ಮ ಕುಟುಂಬದಲ್ಲಿ ಬಹಳ ಜನ ಸದಸ್ಯರು ಇದ್ದರಿಂದ ಮುಂದೆ ಅನುಕೂಲವಾಗಲಿ ಎಂದು ಎಲ್ಲರ ಹೆಸರಿಗೆ ಪ್ರತ್ಯೇಕವಾಗಿ ಮನೆಗಳನ್ನು ಕಟ್ಟಿಸುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ.

1 ರಿಂದ 3ನೇ ಪ್ರತಿವಾದಿಯರು ಹಾಗೂ ನಮ್ಮ ತಂದೆ ಸೇರಿಕೊಂಡು ದುಡಿದು ಸಂಪಾದಿಸಿದ ಆಸ್ತಿಗಳಲ್ಲಿ ನಾವುಗಳು ಎಲ್ಲರೂ ನಮಗೆ ಅನುಕೂಲ ಬಂದಂತೆ ಉದ್ಯೋಗಗಳನ್ನು ಪ್ರಾರಂಭಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಉದ್ಯೋಗಕ್ಕೆ ನಾನು ಸ್ವಂತ ಯಾವುದೇ ಬಂಡವಾಳ ಹೂಡಿರುವುದಿಲ್ಲ, ಆದರೆ ಬ್ಯಾಂಕಿನಿಂದ ಸಾಲ ಪಡೆದು ಬಂಡವಾಳ ಹಾಕಿರುತ್ತೇನೆ. 2 ಮತ್ತು 3ನೇ ಪ್ರತಿವಾದಿಯರು ನಡೆಸುತ್ತಿದ್ದ ಅಂಗಡಿಯಲ್ಲಿ ನಾನು ಸಹ ಕೆಲಸ ಮಾಡುತ್ತಿದ್ದು, ನನಗೆ ಅವರು ವಾರಕ್ಕೆ ರೂ.10/- ಕೊಡುತ್ತಿದ್ದರು. ಸದರಿ ಬಂದ ಹಣವನ್ನು ನಾನು ಕೂಡಿಟ್ಟು ಉದ್ಯೋಗ ಪ್ರಾರಂಭಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ನಾನು ಸಾಲ ಪಡೆದು ಉದ್ಯೋಗ ಪ್ರಾರಂಭಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಸಹೋದರ ಬಸವರಾಜ ದುಷ್ಟಚಟಗಳಿಗೆ ಬಲಿಯಾಗಿ ಸರಿಯಾಗಿ ಉದ್ಯೋಗ ಮಾಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನನ್ನ ಸಹೋದರ ಸನ್ 2004 ರಲ್ಲಿ ತೀರಿಕೊಂಡಿರುತ್ತಾನೆ ಎಂದರೆ ನಿಜ. ಅವರು ತೀರಿಕೊಂಡಿದ್ದರಿಂದ ಅವರ ವಾರಸುದಾರರಿಗೆ ಯಾವುದೇ ಆಸ್ತಿ ಕೊಡಬಾರದೆಂಬ ದುರದ್ದೇಶದಿಂದ ಆತ ಯಾವುದೇ ಆಸ್ತಿ ಬಿಟ್ಟು ಹೋಗಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾವೆಲ್ಲರೂ ಒಟ್ಟಿಗೆ ವಾಸವಾಗಿದ್ದರಿಂದ ಸದರಿ ನನ್ನ ಸಹೋದರನ ಮಗಳಾದ 16ನೇ ಪ್ರತಿವಾದಿ-ಭಾಗ್ಯಶ್ರೀ ಇವಳನ್ನು ಖರ್ಚು ಮಾಡಿ ಎಮ್.ಬಿ.ಬಿ.ಎಸ್., ಎಮ್.ಡಿ ಓದಿಸಿರುತ್ತೇವೆ ಎಂದರೆ ನಿಜ. ನಾವೆಲ್ಲರೂ ಕೂಡಿ ಇದ್ದಾಗ ಎಲ್ಲರ ಹೆಸರಿಗೆ ವಿಮಾ ಪಾಲಿಸಿಗಳನ್ನು ಪಡೆದುಕೊಂಡಿದ್ದು, ಅದೇ ರೀತಿ ನನ್ನ ಸಹೋದರ ಬಸವರಾಜ ತೀರಿಕೊಂಡ ನಂತರ ಆತನ ಹೆಸರಿಗೆ ರೂ.40,00,000/- ವಿಮಾ ಮೊತ್ತ ಬಂದಿರುತ್ತದೆ ಎಂದರೆ ನಿಜ. ನಾವು ನನ್ನ ಸಹೋದರನ ಹೆಂಡತಿ-15ನೇ ಪ್ರತಿವಾದಿಗೆ ಸರಿಯಾಗಿ ಖರ್ಚಿಗೆ ಕೊಡದೇ ಇದ್ದರಿಂದ ಅವಳು ಇದೇ ನ್ಯಾಯಾಲಯದಲ್ಲಿ ತನ್ನ ಜೀವನಾಂಶಕ್ಕಾಗಿ ಅರ್ಜಿಯನ್ನು ಸಲ್ಲಿಸಿ ನ್ಯಾಯಾಲಯದ ಆದೇಶದಂತೆ ಮಧ್ಯಂತರ ಜೀವನಾಂಶ ಪಡೆಯುತ್ತಿದ್ದಾಳೆ ಎಂದರೆ ನಿಜ.

ನಾವು ಈಹೊತ್ತಿಗೂ ಸಹ ಜಂಟಿ ಕುಟುಂಬದಲ್ಲಿ ವಾಸವಾಗಿದ್ದು, ಆಸ್ತಿ ನಂ.20 ಮತ್ತು 21 ಹಾಗೂ ಅವುಗಳ ಸಿ.ಟಿ.ಎಸ್. ನಂ.3308ಎ, 3308ಬಿ ನೇದ್ದವುಗಳು ನಮ್ಮ ಹೆಸರಿಗೆ ಜಂಟಿಯಾಗಿರುತ್ತವೆ ಎಂದರೆ ಸರಿಯಲ್ಲ. ನಾವು ಮನೆಯಲ್ಲಿ ಬಹಳ ಸದಸ್ಯರು ಇದುದ್ದರಿಂದ ಹಾಗೂ ಸಾಕಷ್ಟು ಆಸ್ತಿಗಳು ಇರುವುದರಿಂದ ನಮ್ಮ ಕುಟುಂಬಕ್ಕೆ ಅನುಕೂಲವಾಗುವಂತೆ ಬೇರೆ ಬೇರೆ ಮನೆಗಳನ್ನು ಕಟ್ಟಿಸಿ ನಮಗೆ ಅನುಕೂಲ ಬಂದಂತೆ ಪರಸ್ಪರರ ಒಪ್ಪಿಗೆ ಮೇರೆಗೆ ಬೇರೆ ಬೇರೆ ಮನೆಗಳಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿಯಲ್ಲ. ನಾನು ಹಾಜರಪಡಿಸಿದ 6 ಖರೀದಿ ಪತ್ರಗಳಂತೆ ಎಲ್ಲಾ ಆಸ್ತಿಗಳನ್ನು ಜಂಟಿ ಕುಟುಂಬದ ಆದಾಯದಿಂದ ಖರೀದಿಸಿದ್ದರೂ ಸಹ ನನ್ನ ಸ್ವಂತ ದುಡಿಮೆಯಿಂದ ಬಂದ ಆಧಾಯದಿಂದ ಸದರಿ ಆಸ್ತಿಗಳನ್ನು ಖರೀದಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಉದ್ಯೋಗಕ್ಕೆ ಅನುಕೂಲವಾಗಲಿ ಎಂದು ಪ್ರತ್ಯೇಕವಾಗಿ ಫರ್ಮ್‌ಗಳನ್ನು ನೊಂದಾಯಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ಉದ್ಯೋಗಕ್ಕೆ ಅನುಕೂಲವಾಗಲಿ ಎಂದು ಪಾಲುದಾರಿಕೆ ಸಂಸ್ಥೆಯನ್ನು ನೊಂದಾಯಿಸಿಕೊಂಡು ನ್ಯಾಯಾಲಯದ ಮುಂದೆ ಸದರಿ ಪಾಲುದಾರಿಕೆ ಸಂಸ್ಥೆ ನಮಗೆ ಮಾತ್ರ ಸಂಬಂಧಿಸಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2ನೇ ಪ್ರತಿವಾದಿ ವಾದಿಯ ವಿರುದ್ಧ ನಿಡಿ.168 ರಂತೆ ಸಲ್ಲಿಸಿದ ದಾವೆಯು ನಾವೆಲ್ಲರೂ ಜಂಟಿ ಕುಟುಂಬದಲ್ಲಿ ವಾಸವಾಗಿದ್ದರಿಂದ ಸಾಲ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ನ್ಯಾಯಾಲಯವು ಸದರಿ ದಾವೆಯನ್ನು ವಜಾ ಮಾಡಿರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ನಿಡಿ.171 ರಂತೆ ಹಾಜರಪಡಿಸಿದ ಖರೀದಿ ಕರಾರ ಪತ್ರವು ಸಹ ನಮ್ಮ ಜಂಟಿ ಕುಟುಂಬದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಈ ಹೊತ್ತಿಗೂ ಪಾಲು ವಾಟ್ನಿಯಾಗಿರುವುದಿಲ್ಲ, ಆದ್ದರಿಂದ ಪಾಲುವಾಟ್ನಿಯಾದ ಬಗ್ಗೆ ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ವಾದಿಗೆ ಜಂಟಿ ಕುಟುಂಬದ ಆಸ್ತಿಗಳಲ್ಲಿ ಪಾಲು ಕೊಡಬಾರದೆಂಬ ದುರುದ್ದೇಶದಿಂದ ನಮ್ಮ ಕುಟುಂಬದಲ್ಲಿ ಈಗಾಗಲೇ ಪಾಲು ವಾಟ್ನಿಯಾಗಿರುತ್ತದೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲು</u>**: 15 ರಿಂದ 17ನೇ ಪ್ರತಿವಾದಿಯರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ